ಸಾಕ್ಷಿಯನ್ನು ದಿಃ**23.02.2026** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಎಸ್ ಜಿ ವಕೀಲರಿಂದಃ-</u>**

ಕೇಸ್ ಹಾಕಿರುವ ವಿಚಾರಗಳನ್ನು ನಾನು ತಿಳಿದುಕೊಂಡಿದ್ದೇನೆ. ದಾವಾ ಸ್ವತ್ತುಗಳು ಕೃಷ್ಣೇ ಅರಸ್ ರವರ ಒಟ್ಟು ಕುಟುಂಬದ ಸ್ವತ್ತುಗಳು ಎಂದರೆ ಸರಿಯಲ್ಲ. ಸದರಿ ಕೃಷ್ಣೇ ಅರಸ್ ರವರು ಹುಣಸೂರು ತಾಲ್ಲೂಕಿನಲ್ಲಿ ಖರೀದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಹಾಗೇ ಕೆಲವು ಆಸ್ತಿಗಳನ್ನು ಮಾರಾಟ ಮಾಡಿದ್ದರು ಎಂದರೆ ಸರಿ. ಸದರಿ ವಿಚಾರವನ್ನು ಲಿಖಿತ ತಕರಾರು ಸಲ್ಲಿಸುವ ವೇಳೆ ವಕೀಲರಿಗೆ ಹೇಳಿ ಬರೆಸಿಲ್ಲ ಎಂದರೆ ಸರಿ. ಹಾಗಾಗಿ ಲಿಖಿತ ಹೇಳಿಕೆಯಲ್ಲಿ ಹೇಳಿರುವ ವಿಚಾರಗಳೆಲ್ಲಾ ಅಪೂರ್ಣ ಎಂದರೆ ಸರಿಯಲ್ಲ. ನಮ್ಮ ತಂದೆ ಕೆ ಆರ್ ನಗರ ತಾಲ್ಲೂಕಿನ ಕೊಗಲೂರು ಗ್ರಾಮದವರೆಂದರೆ ಸರಿ. ಅವರು ಹುಣಸೂರು ತಾಲ್ಲೂಕಿಗೆ ವಲಸೆ ಬಂದಿದ್ದರು ಎಂದರೆ ಸರಿ. ಅವರು ಹುಣಸೂರು ತಾಲ್ಲೂಕಿ ಅಂಚ್ಯಾ ಗ್ರಾಮದಲ್ಲಿ ವಾಸ ಇದ್ದರು ಎಂದರೆ ಸರಿ. ಅವರು ಕೆಲವು ಆಸ್ತಿಗಳನ್ನು ಅಂದರೆ ತಂಬಾಕು ಹದ ಮಾಡುವ ಬ್ಯಾರನ್ , ಪಂಪ್ ಸೆಂಟ್ , ತೋಟ ಖರೀದಿ ಮಾಡಿದ್ದರೂ ಎಂದರೆ ಸರಿಯಲ್ಲ. ನಮ್ಮ ತಂದೆ ಸೂರಣ್ಣನವರಿಂದ ಜಮೀನುಗಳನ್ನು ಖರೀದಿ ಮಾಡಿದ್ದರೂ ಎಂದರೆ ಸರಿ. ಸಾಕ್ಷಿ ಅದನ್ನು ನಮ್ಮ ಅಕ್ಕತಂಗಿಯರಿಗೆ ಬರೆದು ಕೊಟ್ಟಿದ್ದರು ಎನ್ನುತ್ತಾರೆ. ಸದರಿ ವಿಚಾರವನ್ನು ತಕರಾರಿನಲ್ಲಿ ಹೇಳಿ ಬರೆಸಿರುತ್ತೇನೆ. ಸಾಕ್ಷಿ ಪುನಃ ತಕರಾರಿನಲ್ಲಿ ಆ ವಿಚಾರವನ್ನು ಬರೆಸಿಲ್ಲ ಆದರೆ ದಾಖಲೆಗಳನ್ನು ಕೊಟ್ಟಿರುತ್ತೇನೆ. ನಮ್ಮ ತಂದೆ ಪ್ರಪ್ರಥಮವಾಗಿ ಸೂರಣ್ಣರವರಿಂದಲೇ ಜಮೀನು ಖರೀದಿ ಮಾಡಿ ನೆಲಗೊಂಡರು ಎಂದರೆ ಸರಿಯಲ್ಲ. ಸರ್ವೆ ನಂ.30, 32 ರ ಜಮೀನನ್ನು ಖರೀದಿ ಮಾಡಿ ನಮ್ಮ ತಂದೆ ನೆಲಗೊಂಡಿದ್ದರು. ನಮ್ಮ ತಂದೆ ಸೂರಣ್ಣನವರಿಂದ ಖರೀದಿ ಮಾಡಿದ ಜಮೀನನ್ನು ಹೆಣ್ಣು ಮಕ್ಕಳಿಗೆ ಬರೆದಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2012-13 ರಲ್ಲಿ ಸುಜಾತಳಿಗೆ 2 ಎಕರ ಜಮೀನನ್ನು , ಸುಮಾ ಎಂಬುವವರಿಗೆ 2 ಎಕರೆ ಜಮೀನಿನ್ನು ನಮ್ಮ ತಂದೆ ಬರೆದು ಕೊಟ್ಟಿರುತ್ತಾರೆ. ಯಾವ ದಾಖಲೆ ಮೂಲಕ ಬರೆದು ಕೊಟ್ಟಿದ್ದಾರೆಂದು ನನಗೆ ಗೊತ್ತಿಲ್ಲ. ಅಂತಹ ದಾಖಲೆಗಳು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲದಿದ್ದರೇ ಮುಂದೆ ಕೊಡುತ್ತೇನೆ ಎನ್ನುತ್ತಾರೆ. ಸೂರಣ್ಣನಿಂದ ಖರೀದಿ ಮಾಡಿದ ಜಮೀನುಗಳಿಂದ ಬಂದ ಆದಾಯದಿಂದ ಜಮೀನುಗಳನ್ನು ನಮ್ಮ ತಾಯಿಯ ಹೆಸರಿಗೆ ನಮ್ಮ ತಂದೆ ಖರೀದಿ ಮಾಡಿದ್ದರೂ ಎಂದರೆ ಸರಿಯಲ್ಲ. ಕೊಗ್ಲೂರಿನಲ್ಲಿದ್ದಂತಹ ಜಮೀನುಗಳನ್ನು ಮಾರಾಟ ಮಾಡಿ ಬಂದಂತಹ ಹಣದಿಂದ ನಮ್ಮ ತಂದೆ ಸೂರಣ್ಣನವರಿಂದ

ಜಮೀನನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಕೊಗ್ಲೂರಿನಲ್ಲಿ ನಮ್ಮ ತಂದೆಗೆ ಯಾವುದೇ ಆಸ್ತಿ ಇರಲಿಲ್ಲ. ನಮ್ಮ ತಂದೆಗೆ ಕೊಗ್ಲೂರಿನಲ್ಲಿ ಆಸ್ತಿಗಳು ಇದ್ದರೂ ಸುಳ್ಳು ಹೇಳುತ್ತಿದ್ದೇನೆಎಂದರೆ ಸರಿಯಲ್ಲ. ನನ್ನ ತಾಯಿ ಗೃಹಿಣಿ ಎಂದರೆ ಸರಿ. ಅವರಿಗೆ ಯಾವುದೇ ಆದಾಯದ ಮೂಲ ಇರಲಿಲ್ಲ ಎಂದರೆ ಸಾಕ್ಷಿ ಅವರ ತಾಯಿ ಕಡೆಯಿಂದ ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ಸದರಿ ವಿಚಾರವನ್ನು ತಕರಾರಿನಲ್ಲಿ ಬರೆಸಿದ್ದೀರಾ ಎಂದರೆ ಬರೆಸಿಲ್ಲ. ನಮ್ಮ ತಾಯಿಗೆ ತವರು ಮನೆಯಿಂದ ಆಸ್ತಿ ಬಂದಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಐಟಂ ನಂ.6 ಹುಣಸೂರು ಪಟ್ಟಣದಲ್ಲಿರುವಂತಹ ಕಮರ್ಷಿಯಲ್ ಕಾಂಪ್ಲೇಕ್ಸ್ ನಮ್ಮ ತಂದೆಯವರು ಖರೀದಿಸಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಯನ್ನು ಸೂರಣ್ಣನವರಿಂದ ಖರೀದಿ ಮಾಡಿದಂತಹ ಜಮೀನಿನಿಂದ ಬಂದಂತಹ ಆದಾಯದಲ್ಲಿ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ವಾದಿಗೆ ತಂದೆ ಇದ್ದಾಗ ಆಗಲೀ ಅವರ ನಂತರವಾಗಲೀ ಯಾವುದೇ ಭಾಗ ಬಂದಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಿನಾಂಕಃ 06.09.2001 ರಲ್ಲಿ ತಂದೆಯಿಂದ ಐಟಂ ನಂ.6 ಕ್ಕೆ ಸಂಬಂಧಿಸಿದಂತೆ ದಾನಪತ್ರ ಬರೆಯಿಸಿ ಕೊಂಡಿದ್ದೇನೆ ಎಂದರೆ ಸರಿ. ಸದರಿ ಸ್ವತ್ತು ಕೃಷ್ಣೇ ಅರಸ್ ರವರ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ಅಲ್ಲದೇ ನಮ್ಮ ತಾಯಿಯ ಹೆಸರಿನಲ್ಲಿರುವ ಎಲ್ಲಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.